Date : 23-9-2015

# ಕೇಂದ್ರ ಸರಕಾರದಿಂದ ಬೇಳೆಕಾಳು, ಖಾದ್ಯತೈಲ, ತೈಲಬೀಜಗಳ ನಿಯಂತ್ರಣ ಒಂದು ವರ್ಷ ಮುಂದೂಡಿಕೆ.

ಕೇಂದ್ರ ಸರಕಾರ ಬೇಳೆಕಾಳು, ಖಾದ್ಯತೈಲ, ತೈಲಬೀಜಗಳ ಮೇಲೆ ನಿಯಂತ್ರಣ ಕಾಯಿದೆಯನ್ನು ಒಂದು ವರ್ಷ ಮುಂದುವರಿಸಿದೆ. ಇದರನ್ವಯ ರಾಜ್ಯ ಸರಕಾರಗಳಿಗೆ ಅಕ್ರಮ ದಾಸ್ತಾನು ಮಾಡಿ ಬೆಲೆಯೇರಿಸುವ ವಿರುದ್ಧ ಹೋರಾಡಲು ಅವಶ್ಯಕ ವಸ್ತುಗಳ ಕಾಯಿದೆಯನ್ವಯ ದಾಸ್ತಾನು ಮಿತಿ ಹೇರಿಕೆ ಲೈಸೆನ್ಸ್ ಅವಶ್ಯಕತೆ ಮುಂತಾದ ಕ್ರಮಗಳನ್ನು ಕೈಗೊಳ್ಳಲು ಅಧಿಕಾರ ಲಭ್ಯವಾಗುತ್ತಿದೆ.

2014ರಲ್ಲಿ ಈ ಅವಶ್ಯಕ ವಸ್ತುಗಳ ದರ ಅಧಿಕವಾದಾಗ ಕೇಂದ್ರ ಸರಕಾರ ಇದಕ್ಕೆ ನಿಯಂತ್ರಣ ಹೇರಿತ್ತು. ಕೆಲವು ಬೇಳೆಕಾಳು ಉತ್ಪಾದಿಸುವ ರಾಜ್ಯಗಳು ಬಳಕೆದಾರ ವ್ಯವಹಾರ ವಿಭಾಗದ ಒತ್ತಾಯದ ಹೊರತಾಗಿಯೂ ಇನ್ನೂ ಇವುಗಳ ಮೇಲೆ ದಾಸ್ತಾನು ಮಿತಿ ಹೋರಿಲ್ಲವೆಂದು ಕಳವಳ ಕೇಂದ್ರ ಸರಕಾರಕ್ಕಿದೆ. ದರ ನಿಯಂತ್ರಣಕ್ಕೆ ಕೇಂದ್ರ ಸರಕಾರ, ಉದ್ದು ಮತ್ತು ಆರ್ಹರಿಯ ವಾಯಿದೆ ವ್ಯವಹಾರದ ಅಮಾನತು, ಬೇಳೆಕಾಳುಗಳ ರಫ್ತು ನಿಷೇಧ, ಬೇಳೆಕಾಳುಗಳ ಆಮದಿನ ಮೇಲೆ ಶೂನ್ಯ ಕರ ಮುಂತಾದ ಕ್ರಮಗಳನ್ನು ಕೈಗೊಂಡಿದೆಯೆಂದು ಹೇಳಿದೆ.